ಶ್ರೀ ವಿ. ಆರ್. ನಾಯ್ಡು.—ಈ 400 ಮನೆಗಳಲ್ಲದೆ ಆ ಬಾಲಾಜಿನಗರ; ಸ್ವತಂತ್ರನಗರ, ಸಿದ್ಧಾನಗರ; ಇತ್ಯಾದಿ ಕೆಲವು ಪ್ರದೇಶಗಳು ದ್ವೀಪದಂತೆ ಆಗಿ ಅಲ್ಲಿಯ ಜನರು ದೋಣಿಗಳಲ್ಲಿ ದ್ವಿಪಾಂತರವಾಸಿಗಳಂತೆ ಆಗಿದ್ದಾರೆಂಬುದನ್ನು ತಾವು ಪರೀಕ್ಷೆ ಮಾಡಿದ್ದೀರಾ?

ಶ್ರೀ ಟಿ. ಚನ್ನಯ್ಯ.—ಬಾಲಾಜಿನಗರದಲ್ಲಿ ಕೆಲವು ಎಕ್ಸ್ ಸರ್ವಿಸ್ ಮೆನ್‌ಗಳೂ ವಾಸ್ತು ರಾಜಾಮಿಲ್ ಪಕ್ಕದಲ್ಲಿ ಕೆಲವರು ಮಣ್ಣಿನಗೋಡೆ ಮನೆಗಳನ್ನು ಹಾಕಿಕೊಂಡು ವಾಸಿಸುತ್ತಿದ್ದರು. ಅಲ್ಲೆಲ್ಲಾ ಸ್ವಲ್ಪ ಡ್ಯಾಮೇಜಾಗಿದೆಯೆಂದು ತಿಳಿದುಬಂದಿದೆ.

ಶ್ರೀ ವಿ. ಆರ್. ನಾಯ್ಡು.—ಆಜನರೆಲ್ಲ ಬಹಳ ಬಡವರು. ಛತ್ರಗಳಲ್ಲಿ ರಸ್ತೆಮೇಲೆ ವಾಸಮಾಡುತ್ತಿದ್ದಾರೆ. ಅವರಿಗೆ ತಕ್ಷಣ ಪರಿಹಾರನೀಡಲು ಸರ್ಕಾರದವರು ಏನು ಕಾರ್ಯಕ್ರಮಗಳನ್ನು ಕೈಗೊಂಡಿರುತ್ತಾರೆ?

ಶ್ರೀ ಟಿ. ಚನ್ನಯ್ಯ.—ಕಾರ್ಪೊರೇಷ್ ಅಧಿಕಾರಿಗಳು ಪರಿಶೀಲನೆಮಾಡಿ ಸರ್ಕಾರಕ್ಕೆ ವರದಿ ಮಾಡಿದ ನಂತರ ನಾವು ಏನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂಬ ಬಗ್ಗೆ ತೀವ್ರವಾಗಿ ಪರಿಶೀಲನೆ ಮಾಡಲಾಗುತ್ತದೆಂದು ನಾನಾಗಲೇ ತಿಳಿಸಿದ್ದೇನೆ.

ಶ್ರೀ ವಿ. ಆರ್. ನಾಯ್ಡು.—ತಕ್ಷಣ ಪರಿಹಾರ ನೀಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಟಿ. ಚನ್ನಯ್ಯ.—ಪರಿಶೀಲನೆ ಮಾಡುತ್ತೇವೆ.

Sri K. S. VASAN.—Has it come to the notice of the Government that nearly about one lakh of people in the City are very badly affected due to this heavy rain?

Sri T. CHANNIAH.—That information is not correct.

Sri K. S. VASAN.—Has not the Mayor of the Corporation through one of his Press Conferences requested that since the roads are very much damaged and since the Government are using the roads, the latter should come forward to give help to some extent in the repairs and relief work?

Sri T. CHANNIAH.—It is true that the roads have been badly damaged. After receipt of report from the Corporation, action will be taken to repair the roads.

Sri K. S. VASAN.—Does not the report received by the Government regarding these heavy rains reveal that there is the serious danger of epidemic disease being spread immediately?

Sri T. CHANNIAH.—Epidemic diseases will spread only if there is stagnation of water and not when there is flow of water.

Sri K. S. VASAN.—Is it not the duty of the Government to assure the public that there is no fear of break of epidemic diseases especially when the Corporation authorities have issued statements to the contrary?

Sri T. CHANNIAH.—My information is, on account of heavy rains there will be no stagnation and mosquitoes cannot breed. If there is stagnation of water, epidemic diseases will break.

Sri K. S. VASAN.—Are there no places in Bangalore where water is stagnating and places submerged in water?

Sri T. CHANNIAH.—No.

ಶ್ರೀ ವಿ. ವೆಂಕಟಪ್ಪ.—ಕ್ರಾಂಬಿಗಲ್ ರಸ್ತೆಯಲ್ಲಿಯೇ ನೀರು ಹೊಳೆಯಂತೆ ಹರಿಯುತ್ತಿರುವ ವಿಚಾರ ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಚನ್ನಯ್ಯ.—ಹೌದು. ಲಾಲ್‌ಬಾಗ್ ಕೆರೆ ತುಂಬಿದೆ. ಆ ಕಾರಣದಿಂದ ನೀರು ಅಲ್ಲಿ ರಸ್ತೆ ಮೇಲೆ ಓವರ್ ಫ್ಲೋ ಆಗುತ್ತಿರಬಹುದು.

ಶ್ರೀ ವಿ. ವೆಂಕಟಪ್ಪ.—ಆ ನೀರನ್ನು ಬೇರೆಕಡೆ ಹೋಗುವಂತೆ ಮಾಡುವುದಕ್ಕಾಗುವುದಿಲ್ಲವೇ?

ಶ್ರೀ ಟಿ. ಚನ್ನಯ್ಯ.—ಅದನ್ನು ಪರಿಶೀಲಿಸಿ ನೋಡಬೇಕು.

ಶ್ರೀ ವಿ. ವೆಂಕಟಪ್ಪ.—ಬಹಳ ದಿವಸಗಳಿಂದಲೂ ಲಾಲ್‌ಬಾಗ್ ಕೆರೆಯ ನೀರು ಆ ಕ್ರಾಂಬಿಗಲ್ ರಸ್ತೆಯಲ್ಲೇ ಹರಿಯುತ್ತಿದೆಯೆಂಬ ವಿಚಾರ ತಮ್ಮ ಗಮನಕ್ಕೆ ಇಲ್ಲಿಯವರೆಗೂ ಬಂದೇ ಇಲ್ಲವೇ?

ಶ್ರೀ ಟಿ. ಚನ್ನಯ್ಯ.—ಫಲ-ಪುಷ್ಪಗಳ ಇಲಾಖೆಯವರು ಅದನ್ನು ಬದಲಾಯಿಸುವ ವಿಚಾರವನ್ನು ತೀವ್ರವಾಗಿ ಪರಿಶೀಲನೆ ಮಾಡುತ್ತಿದ್ದಾರೆ.

ಶ್ರೀ ಸಿ. ಟಿ. ಹನುಮಂತಯ್ಯ.—ಗೋಪಾಲಪುರ ಬಡಾವಣೆ ಮತ್ತು ಮಾಗಡಿ ರಸ್ತೆಯಲ್ಲಿ ಅನೇಕ ಹರಿಜನರ ಮನೆಗಳು ಬಿದ್ದುಹೋಗಿರುವ ವಿಚಾರ ತಮ್ಮ ಗಮನಕ್ಕೆ ಬಂದಿದೆಯೇ? ಎಷ್ಟು ಮನೆಗಳು ಬಿದ್ದು ಹೋಗಿವೆ?

ಶ್ರೀ ಟಿ. ಚನ್ನಯ್ಯ.—ಆ ಬಗ್ಗೆ ನಮಗೆ ಯಾವ ವರದಿಯೂ ಬಂದಿಲ್ಲ.

ಶ್ರೀ ಸಿ. ಟಿ. ಹನುಮಂತಯ್ಯ.—ಆ ವರದಿ ಬಂದನಂತರ ಅವರಿಗೇನಾದರೂ ಪರಿಹಾರ ನೀಡುತ್ತೀರಾ?

ಶ್ರೀ ಟಿ. ಚನ್ನಯ್ಯ.—ಆ ವಿಚಾರವನ್ನು ನಾವಿನ್ನೂ ಪರಿಶೀಲನೆ ಮಾಡುತ್ತಿದ್ದೇವೆ.

Interim Relief to Government Employees.

Q.—27. Sri S. SRINIVASA IYENGAR (T.-Narsipur).—

Will the Government be pleased to state:—

(*a*) the reasons that weighed with them for the incorporation of para 6 of G. O. No. Fl. (B) 10291-10390/Bud. 95-56-1, dated 17th October 1956 regarding interim relief to Government employees;

(SRI S. SRINIVASA IYENGAR.)

(*b*) whether they are aware that as a result of this para a large number of Government servants will be denied of their just relief awaited from a very long time ;

(*c*) will they consider deleting this para and confer benefits to all Government servants irrespective of their service ?

A.—Sri H. SIDDAVEERAPPA (Minister for Home and Finance).—

(*a*) In the case of any relief of the nature adverted to, it is usual to prescribe a minimum period of service for being entitled to the relief. In this case Government thought that this minimum should be at least one year and cannot be less.

(*b*) In the absence of this minimum service even a person of one day's service will be eligible for this relief, which was not considered desirable.

(*c*) This is not practicable.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಸ್ವಾಮಿ, ಸರ್ಕಾರದವರು ಈ ನೌಕರರು ಬಹಳ ಕಷ್ಟಪರಿಸ್ಥಿತಿಯಲ್ಲಿರುವುದರಿಂದ ಅಲ್ಲವೇ ಅವರಿಗೀಗ ಈ ಒಂದು ಪರಿಹಾರವನ್ನು ತಾವು ಅವರಿಗೆ ನೀಡಿದ್ದು ?

*ಶ್ರೀ ಎಚ್. ಸಿದ್ದವೀರಪ್ಪ.—ಹೌದು. Subject to the condition that the pay is within Rs. 300.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಹಾಗಾದರೆ ಈ ಹುಕುಂ ಆಗಸ್ಟ್ ಒಂದನೆ ತಾರೀಖಿನಲ್ಲಿ ಯಾರುಯಾರು ಒಂದುವರ್ಷಕ್ಕಿಂತ ಕಡಮೆ ಸರ್ವೀಸಾಗಿರುತ್ತದೆಯೋ ಅಂಥಾವರಿಗೆ ಇದು ಅನ್ವಯನವೆ ಇದ್ದಲ್ಲ ತಾವು ಅವರ ಕಷ್ಟವನ್ನು ಏನೂ ಪರಿಹಾರ ಮಾಡಿದಂತೆ ಆಗಲಿಲ್ಲವಲ್ಲವೇ !

ಶ್ರೀ ಎಚ್. ಸಿದ್ದವೀರಪ್ಪ.—ತಾವು ಏನು ಹೇಳುತ್ತಿದ್ದೀರಿ ಎನ್ನುವುದೇ ನನಗೆ ಇನ್ನೂ ಅರ್ಥವಾಗುತ್ತಿಲ್ಲ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಒಂದು ವರ್ಷದಿಂದ ನೌಕರಿಯಲ್ಲಿರತಕ್ಕ ಸರ್ಕಾರಿ ನೌಕರರಿಗೆ ಮಾತ್ರ ಈ ಆಜ್ಞೆ ಅನ್ವಯವಾಗುತ್ತದೆ. ಇತರರಿಗೆ ಈಗ ತೀರ್ಮಾನವಾಗಿರುವ ರೀತಿಯಲ್ಲಿ ಅನುಕೂಲವಾಗಲು ಸಾಧ್ಯವಿಲ್ಲವೆನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಆಗಸ್ಟ್ ಒಂದನೇ ತಾರೀಖಿನೊಳಗಾಗಿ ಒಂದು ವರ್ಷ ಯಾರು ನೌಕರಿ ಹಾಕಿರುತ್ತಾರೋ ಅವರಿಗೆ ಮಾತ್ರ ಇದು ಅನ್ವಯಿಸುತ್ತದೆನ್ನುವುದು ನಾವು ಹೊರಡಿಸಿರುವ ಆಜ್ಞೆಯಿಂದ ಸ್ಪಷ್ಟವಾಗಿದೆ. ಇಂಥ ಹುಕುಮುಗಳನ್ನು ಸರ್ಕಾರದವರು ಮಾಡಬೇಕಾದರೆ ಇದನ್ನೂ ಅವರು ಗಮನದಲ್ಲಿಟ್ಟುಕೊಂಡಿದ್ದಿರೆಂಬುದು ತಮಗೇ ವೇದ್ಯವಾಗುತ್ತದೆ. ಈಗ ನಾವು ಸಂಬಳ ಸಾರಿಗೆಗಳನ್ನು ಪುನರ್ವಿಮರ್ಶೆ ಮಾಡಿಲ್ಲ. ಹಂಗಾಮಿ ಪರಿಹಾರವನ್ನು ಚೌಕಟ್ಟಿನಲ್ಲಿ ಬರತಕ್ಕ ಕೆಲವರು ಅಧಿಕಾರಿಗಳಿಗೆ ಕೊಟ್ಟಿದ್ದೇವೆ. ಆದುದರಿಂದ ಆಗಸ್ಟ್ ಒಂದನೇ ತಾರೀಖಿಗೆ ಒಂದು ವರ್ಷ ಸರ್ವಿಸ್ ಆಗದೆ ಇರುವವರಿಗೆ ಯಾವುದೋ ಒಂದು ಬಗೆಯ ಪರಿಹಾರವನ್ನಾದರೂ ತಿದ್ದುಪಡಿ ಮಾಡದೆ ಇರತಕ್ಕ ತೊಂದರೆಯಾಗುವುದಿಲ್ಲ. ಸಾಮಾನ್ಯವಾಗಿ allocation ಇತ್ಯಾದಿಗಳನ್ನು ಹಾಕಬೇಕಾದರೆ, ಸರ್ಕಾರದವರು ಒಂದು ಹುಕುಂ ಮಾಡಬೇಕಾದರೆ ಒಂದು ಕಾಲ (time) ಗೊತ್ತುಮಾಡುವುದು ಸ್ವಾಭಾವಿಕ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—1ನೇ ಆಗಸ್ಟ್ 1956 ಎಂಬ ತಾರೀಖು ಸರ್ಕಾರಕ್ಕೆ ಹೇಗೆ ಹೊಳೆಯಿತೆಂಬುದು ಗೊತ್ತಾಗಲಿಲ್ಲ. ಅದನ್ನು ದಯವಿಟ್ಟು ತಿಳಿಯಪಡಿಸುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಯಾವುದಾದರೂ ಒಂದು ರೀತಿಯಲ್ಲಿ ಬಗೆಹರಿಸಬೇಕು. 1ನೇ ಆಗಸ್ಟ್ 1956 ಹಾಕದೆ ಇದ್ದರೆ 1ನೇ ಆಕ್ಟೋಬರ್ 1956 ಹಾಕಬೇಕಾಗಿತ್ತು. ಯಾವುದಾದರೂ ಒಂದು ತಾರೀಖನ್ನು ನಮೂದು ಮಾಡಬೇಕಾಗಿತ್ತು.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಹಾಗಾದರೆ ಸರ್ಕಾರಿ ಹುಕುಂ ಹೊರಟ ದಿವಸಕ್ಕೆ ಒಂದು ವರ್ಷ ಸರ್ವಿಸ್ ಆಗಿರುವವರಿಗಾದರೂ ಈ ಪರಿಹಾರ ದೊರೆಯುವಂತೆ ಒಂದು ತಿದ್ದುಪಡಿಯನ್ನು ತರುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ತಾವು ಹೇಳತಕ್ಕದ್ದು ಒಂದು ಹೊಸ idea ಆಗಿದೆ. ಅದರ ಸೂಕ್ಷ್ಮಾತಿಸೂಕ್ಷ್ಮತೆಗಳು ಅದರ ಸಾಧಕಬಾಧಕಗಳು ಏನು, ಯಾವರೀತಿ ಇದೆ ಎಂದು ಪರೀಕ್ಷೆ ಮಾಡಬೇಕು. ತಾವು ಹೇಳುವುದರಲ್ಲಿ ಒಂದು ಅಂಶವಿದೆ. ಅದನ್ನು ಯೋಚನೆ ಮಾಡೋಣ. ಇಷ್ಟುಮಾತ್ರ ನಾನು ಹೇಳಬಲ್ಲೆ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಇನ್ನು ಹತ್ತು ದಿವಸಗಳಲ್ಲಿ ಈಗಿನ ಮೈಸೂರು ಸಂಸ್ಥಾನ ಹೋಗಿಬಿಡುವುದರಿಂದ ಆ ಸಂಸ್ಥಾನದಲ್ಲಿ ಶ್ರದ್ಧೆಯಿಂದ ಕೆಲಸಮಾಡಿದಂಥಾ ನೌಕರರಿಗೆ ಪರಿಹಾರವನ್ನು ಕೊಡುವುದು ಅಗತ್ಯವಾಗಿರುವುದರಿಂದ ಅದಷ್ಟು ಬೇಗ ಸರ್ಕಾರದವರು ಈ ವಿಷಯವನ್ನು ವಿಮರ್ಶೆಮಾಡುತ್ತಾರೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಸಂಪೂರ್ಣವಾಗಿ ಯೋಚನೆಮಾಡಿ ಸರ್ಕಾರದವರು ಈಗ ಮಾಡಿರುವ ಆಜ್ಞೆಯ ಪ್ರಕಾರ ತೀರ್ಮಾನ ಮಾಡಿದ್ದಾರೆ. ತಾವು ಹೇಳುವ ಅಂಶ ಯೋಚನೆಮಾಡತಕ್ಕ ಅಂಶವೆಂದು ಮಾತ್ರ ಹೇಳಬಲ್ಲೆನೇ ವಿನಾ ಹೀಗೆ ಮಾಡುತ್ತೇವೆ, ಹಾಗೆ ಮಾಡುತ್ತೇವೆ ಎಂದು ಹೇಳುವುದಕ್ಕಾಗುವುದಿಲ್ಲ. Because I do not want to give an assurance or undertaking at this stage when the order is passed. It is worthy of being considered is all that I can say.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಹೆಚ್ಷಿಬರತಕ್ಕ ನೌಕರರುಗಳಿಗೆ ಮಾತ್ರ ಈ ಆಜ್ಞೆ ಅನ್ವಯಿಸುತ್ತದೆಯಲ್ಲವೆ ?

ಶ್ರೀ ಎಚ್. ಸಿದ್ದವೀರಪ್ಪ.—ಯಾರು ಮೈಸೂರು ಸರ್ವಿಸಸ್ ರೆಗ್ಯುಲೇಷನ್ಸ್ ವ್ಯಾಪ್ತಿಯಲ್ಲಿ ಬರುತ್ತಾರೆಯೋ ಅವರಿಗೆ ಮಾತ್ರ ಇದು ಅನ್ವಯಿಸುತ್ತದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ನನ್ನ ಪ್ರಶ್ನೆ ನಿರ್ದಿಷ್ಟವಾಗಿದೆ. ಹೆಚ್ಷಿಬರತಕ್ಕ ನೌಕರರಿಗೆ ಮಾತ್ರ ಅನ್ವಯಿಸುತ್ತದೆಯೇ ಎಂದು ಕೇಳುತ್ತಿದ್ದೇನೆ, ಅದಕ್ಕೆ ಸರಿಯಾದ ಉತ್ತರ ಕೊಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಮೈಸೂರು ಸರ್ವಿಸಸ್ ರೆಗ್ಯುಲೇಷನ್ಸ್ ವ್ಯಾಪ್ತಿಯಲ್ಲಿ ಬರತಕ್ಕವರಿಗೆ ಮಾತ್ರ

ಪೆಕ್ಷಷ್ ಬರುವುದಾದರೆ ಅವರಿಗೆ ಮಾತ್ರ ಅನ್ವಯಿಸುತ್ತದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ನೌಕರರಿಗೆ ಇಂಟೆರಿಂ ರಿಲೀಫ್ ಕೊಡುತ್ತೇವೆಂದು ಮಾಡಿರುವುದರಲ್ಲಿ ಸರ್ಕಾರದವರು ನಿರ್ದಿಷ್ಟವಾಗಿ ಇದನ್ನು ಯೋಚನೆ ಮಾಡಿರುತ್ತಾರೆಯೇ?

Mr. DEPUTY SPEAKER.—I think the Hon'ble Minister has got to get it examined. It looks like that. The Hon'ble Minister can kindly get it examined.

Sri H. SIDDAVEERAPPA.—Sir, I can tell the Hon'ble Member. I do not know what are all the categories of Government servants who are eligible for pension. If those that are governed by the M.S.R. are also eligible to get pension, this applies to them. Otherwise, it does not apply.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ನನಗೆ ಹೆಚ್ಚು ಕಾಲ ತೆಗೆದುಕೊಳ್ಳುವುದಕ್ಕೆ ಅವಕಾಶವಿಲ್ಲವಾಗಿ, ಅವರು ಇದನ್ನು examine ಮಾಡುತ್ತಾರೆಂದು ಹೇಳಲಿ.

Sri H. SIDDAVEERAPPA.—I can assure him that I will get the question examined. There is also a further clarification. Let me say, now that the question has been raised by the Hon'ble Member, that because certain doubts were expressed a clarification was issued yesterday. It reads as follows :

"GOVERNMENT ORDER No. FL. (B) 104000-499—BUD. 95-56-2, DATED BANGALORE, THE 19TH OCTOBER 1956.

In view of certain doubts felt with regard to the scope of the Government Order dated the 17th October 1956 referred to above sanctioning Interim Relief to Government servants, it is hereby clarified and declared that the scope of the said order is restricted to Government servants to whom the Mysore Services Regulations are applicable. In the case of the Government Industrial Concerns also the scope of the said Order is restricted to such employees as are Government servants to whom the Mysore Services Regulations are applicable."

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಕೈಗಾರಿಕಾ ಸಂಸ್ಥೆಗಳಲ್ಲಿ ಸರ್ಕಾರಿ ನೌಕರರ ಪೈಕಿ monthly rated employeesಗೆ ಮಾತ್ರ ಅನ್ವಯಿಸುತ್ತದೆಯೇ ಅಥವಾ daily rated employeesಗೆ ಸಹ ಅನ್ವಯಿಸುತ್ತದೆಯೇ?

Sri H. SIDDAVEERAPPA.—So far as Industrial Concerns are concerned, if there are any employees who are governed by M.S.R. then alone, it applies. On the other hand if they are governed under the Work Service Rules, this interim relief does not apply.

Sri K. S. VASAN.—What is the approximate number of Government employees who have put in less than one year service on 1st August 1956 ?

Sri H. SIDDAVEERAPPA.—I want notice.

Sri K. S. VASAN.—Since this interim relief given as Personal Allowance is it intended to give relief to the employees or is it a relief based on the service of the employees ?

Sri H. SIDDAVEERAPPA.—I wanted some working arrangement wherein a large measure relief can be given and I could not go on making calculations as to the actual number. Supposing I had fixed two or three years services, then it would have meant that what is given by one hand is taken away by another with regard to a large majority of the people. Anyway I shall give the number that I have with me. I have quoted these figures a number of times previously The number that will benefit by our interim relief order is :

Below Rs. 50	...	55,000
Rs. 51 to 80	...	25,000
Rs. 81-100	...	5,500
Rs. 101 to 150	...	4,436
Rs. 150 to 200	...	4,098
Rs. 200 to 300	...	1,000
		95,034

About 95,000 employes are benefited by this order.

Sri D. VENKATESH.—May I know, Sir, whether such Government Orders enhancing the allowances in the past were also applicable to the Industrial Concerns ?

Sri H. SIDDAVEERAPPA.—I want notice.

Sri D. VENKATESH.—Was it not a fact that at every stage such increment was also given to Industrial Concerns controlled by the Mysore Government ?

Sri H. SIDDAVEERAPPA.—I want notice. Whatever may be the precedent, in this case Government have absolutely no doubt in their mind that this relief is applicable only to those that are governed by M.S.R. Under the Work Service Rules, the labourers enjoy better facilities to which those that are governed by M.S.R. are not allowed to get benefits. Those that are governed by W.S.R. get production bonus, bonus and various other things. These benefits are not given to those that come under the M.S.R. One cannot have both ways. Therefore, Government have no doubt in their mind that this interim relief cannot be made applicable to those that are governed by the Work Service Rules.

Sri D. VENKATESH.—Will not the Government particularly now specifically exclude such of those industrial employees from the purview of the M.S.R. ?

Sri H. SIDDAVEERAPPA.—That is a matter for examination. But so far as I know, majority of employees in the Government Industrial Concerns are governed by W.S.R. and not by M.S.R.

Sri D. VENKATESH.—I want to know the reason why the Government is insisting upon these employees to come under the M.S.R. or the W.S.R. whenever there is a question of such benefits ?

Sri H. SIDDAVEERAPPA.—I believe labourers were given the freedom of choice as to whether they wanted to come under the M.S.R. or the W.S.R.

9-A.M.

ಶ್ರೀ ಎಂ. ಚಿಕ್ಕಲಿಂಗಯ್ಯ.—ಇಂಟೆರಿಂ ರಿಲೀಫ್ ಕೊಡುವ ವಿಚಾರದಲ್ಲಿ ಎಂ.ಎಸ್.ಆರ್.ಗೆ ಒಳಪಡುವ ಹಾಗಿದ್ದರೆ ಕೊಡುತ್ತೀವೆಂದು ಹೇಳಿದಿರಿ. ಆಗಸ್ಟ್ ಒಂದರವರೆಗೆ ಒಂದು ವರ್ಷ ಸರ್ವಿಸ್ ಆಗದಿರುವವರೂ ಎಂ.ಎಸ್.ಆರ್. ಮತ್ತು ಪಿ.ಎಸ್.ಸಿ. ರೂಲ್ಸ್ ಪ್ರಕಾರ ನೇಮಕ ಮಾಡಲ್ಪಟ್ಟಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಎಂ.ಎಸ್.ಆರ್. ಪ್ರಕಾರ ನೇಮಕವಾಗಿ ಒಂದು ವರ್ಷ ಸರ್ವಿಸ್ ಮಾಡಿರುವವರಿಗೆ ಮಾತ್ರ ಈ ಹಂಗಾಮಿ ಪರಿಹಾರ ಕೊಡುತ್ತೀವೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಹಾಗೆ ಮಾಡುವುದರಿಂದ ಈಗ ಖಾಯಂ ಆಗಿ ಇರುವವರಿಗೂ ಹಂಗಾಮಿ ಯಾಗಿದ್ದು ಮುಂದುವರಿಯುತ್ತಿರುವವರಿಗೂ ಡಿಸ್ಕ್ರಿಮಿನೇಟ್ ಮಾಡಿದ ಹಾಗಾಗುವುದಿಲ್ಲವೆ ?

ಶ್ರೀ ಎಚ್. ಸಿದ್ದವೀರಪ್ಪ.—ಹುಟ್ಟಿದ ಲಾಗಾಯ್ತು ಡಿಸ್ಕ್ರಿಮಿನೇಷ್ ಇದ್ದೇ ಇದೆ. 3 ವರ್ಷಗಳೊಳಗಾಗಿ ದಾವಾ ಹಾಕಬೇಕೆಂದಿದೆ. ಒಂದು ದಿನ ನಿಧಾನವಾದರೂ ಡಿಸ್ಕ್ರಿಮಿನೇಷನ್ ಆಗುವುದಿಲ್ಲವೆ ?

ಶ್ರೀ ಎಂ. ಚಿಕ್ಕಲಿಂಗಯ್ಯ.—ಹಾಗಾದರೆ ರಾಜ್ಯಾಂಗದ ಪ್ರಕಾರ ಅವರಿಗೆ ರಿಲೀಫ್‌ಗೆ ಹಕ್ಕಿಲ್ಲವೇ?

Sri H. SIDDAVEERAPPA.—Constitutional question does not arise.

Arakere Tank (Repair of breach).

Q.—12. Sri N. HUCHMASTHY GOWDA (Huliyurdurga).—

Will the Government be pleased to state :—

(*a*) whether it is a fact that Arakere tank, Kunigal Taluk, has recently breached ;

(*b*) whether an estimate for its repair had been prepared before this breach occurred ; if so, when was the work started ;

(*c*) whether this repair work was being carried on through a contractor or by amani labour ;

(*d*) whether any time limit was fixed to complete the work (details about such limits fixed from time to time to be given) ;

(*e*) the names of persons who were entrusted to execute the work during this period in detail ?

A.—Sri H. SIDDAVEERAPPA (Minister for Home and Finance) [On behalf of SRI A. G. RAMACHANDRA RAO (Minister for Law and Education)].—

(*a*) The breach had occurred even before the survey and settlement.

(*b*) The estimate was prepared after the breach. The work was started in November 1940.

(*c*) The work was carried on piece-work system except waste weir work which was entrusted to a contractor on tender basis.

(*d*) Waste weir work was to be completed before 25th March 1956. He was given an extension of one month's time.

(*e*) The bund work was entrusted to several piece workers and the waste